# ನವಿಲುಗನ್ನಡಿ

- ಡಿಸೆಂಬರ್ ಸಂಚಿಕೆಯ ಮುಖಪುಟ ವರ್ಣರಂಜಿತವಾಗಿ ಮೂಡಿ ಬಂದಿದೆ. ಸಂಪಾದಕೀಯ ಉತ್ತಮವಾಗಿದೆ. ಸಂಚಿಕೆಯ ವೈವಿಧ್ಯಮಯ ಮತ್ತು ಬದುಕಿಗೆ ಸಮೀಪವಾದ ಕತೆಗಳು ಓದುಗರನ್ನು ಹಿಡಿದಿಟ್ಟುಕೊಳ್ಳುತ್ತವೆ. ಇವು ಕನ್ನಡ ಕಥಾಸಾಹಿತ್ಯಕ್ಕೆ ಮೆರುಗು ಕೊಟ್ಟಿವೆ

  **ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕ**

- ಚಿದಾನಂದ ಸಾಲಿ ಅವರ 'ಹುಗ್ಗಿ' ಕತೆ ಗಮನ ಸೆಳೆಯಿತು. ಕತೆಯಲ್ಲಿ ಆನಂದ ಮತ್ತು ಆಹಾರದ ನಡುವಿನ ಹೊಯ್ದಾಟವನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಅಬ್ದುಲ್‌ರಜಾಕ್ ಗುರ್ನಾ ಅವರ 'ಪಂಜರಗಳು' (ಕನ್ನಡಕ್ಕೆ: ಎಸ್. ದಿವಾಕರ್) ಕತೆಯಲ್ಲಿ ಹದಿಹರೆಯದವರ ಆಕರ್ಷಣೆಯ ಚಿತ್ರಣ ಚೆನ್ನಾಗಿ ಮೂಡಿಬಂದಿದೆ.

  **ಬಿ.ಆರ್. ಅಣ್ಣಾಸಾಗರ, ಸೇಡಂ**

- 'ಹುಗ್ಗಿ' ಕತೆ ಮನರಂಜನೆಯ ಜೊತೆಗೆ ಮೂಢನಂಬಿಕೆಗಳನ್ನು ವಿಶ್ಲೇಷಿಸುವಂತೆ ಮಾಡಿತು. ರಾಯಚೂರು ಜಿಲ್ಲೆಯ ಪ್ರಾದೇಶಿಕ ಭಾಷೆ ಮನಸೆಳೆಯಿತು. ಒಂದು ಸಿಹಿ ತಿನಿಸಿನ ಬಗ್ಗೆ ಇಷ್ಟು ರೋಚಕವಾಗಿ ಕತೆ ಬರೆಯಬಹುದು ಎನ್ನುವುದನ್ನು ತೋರಿಸಿಕೊಟ್ಟ ಲೇಖಕರಿಗೆ ಅಭಿನಂದನೆ.

  **ಸೇತುರಾವ್ ಕುಲಕರ್ಣಿ, ಬೆಂಗಳೂರು,**
  **ತಲಕಾಡು ಶ್ರೀನಿಧಿ, ಬೆಂಗಳೂರು**

- 'ಹುಗ್ಗಿ' ಕತೆ ತುಂಬಾ ಆಪ್ತವಾಗಿದೆ. ಜನಪದ ಸೊಗಡಿನಿಂದ ಈ ಕತೆ ಮನಸೆಳೆಯುತ್ತದೆ.

  **ಮಧುಕುಮಾರ ಸಿ.ಎಚ್., ಮಂಡ್ಯ,**
  **ಎಸ್. ಚಂದ್ರಕಾಂತ, ಬೆಂಗಳೂರು**

- ಎಂ. ಮುಕುಂದನ್ ಅವರ ಮಲಯಾಳಂ




  ಕತೆ (ಕನ್ನಡಕ್ಕೆ: ಕೆ. ಪ್ರಭಾಕರನ್) 'ಫೋಟೊ' ಮನಕದಡಿತು.

  **ಜಯಲಕ್ಷ್ಮಿ ಉಪಾಧ್ಯಾಯ, ಕಂಬಾರ್ತಿ**

- ಭಾವೈಕ್ಯದ ಸೂಕ್ಷ್ಮ ವಿಚಾರವನ್ನು ಹೊತ್ತುತಂದ ಗೋಪೀನಾಥ ರಾವ್ ಅವರ 'ಭಾಯಿ ಭಾಯಿ' ಕತೆ ಸರಳವಾಗಿತ್ತು.

  **ಗಿರೀಶ ಸೊಲ್ಲಾಪುರ, ಬಾಗಲಕೋಟೆ**

- ಪ್ರಕಾಶ ಗ. ಖಾಡೆ ಅವರ ಕತೆ 'ಅಕ್ಕಿಕಾಳು' ಹಾಗೂ ಕ್ಲೆರೆನ್ಸ್ ಡೊನಾಲ್ಡ್ ಪಿಂಟೊ ಅವರ ಕೊಂಕಣಿ ಕತೆ (ಕನ್ನಡಕ್ಕೆ: ಜೆ.ವಿ. ಕಾರ್ಲೊ) 'ದೇವರನ್ನು ಮಾರಿದವನು' ಹೃದಯಸ್ಪರ್ಶಿಯಾಗಿವೆ.

  **ಬಾ.ರಂ. ವೀರೇಶ, ಶಿವಮೊಗ್ಗ,**
  **ಬಸವರಾಜ ಕನ್ನೂರ, ಬಾಗಲಕೋಟೆ**

- ಬಿ.ಎಲ್. ವೇಣು ಅವರು ಜನಪ್ರಿಯ ಲೇಖಕ ತ.ರಾ.ಸು. ಕುರಿತು ಬರೆದ ನೆನಪಿನ ಬರಹ ಈ ಸಂಚಿಕೆಗೆ ಮೆರುಗು ನೀಡಿದೆ. ತ.ರಾ.ಸು. ಅವರ ಸಾಹಿತ್ಯ ಬದುಕಿನ ಹಲವು ಘಟ್ಟಗಳನ್ನು ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ.

  **ಚನ್ನಬಸವ ಪುತ್ತೂರ, ಉಡುಪಿ,**
  **ನಿರುಕ್ತಾ, ಬೆಂಗಳೂರು,**
  **ಪಿ. ಜಯವಂತ ಪೈ, ಕುಂದಾಪುರ**